ಅನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪ್ರಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಮೈಸೂರಿನಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಯುಗಾದಿ ಉತ್ಸವದಲ್ಲಿ ದಕ್ಷಿಣ ಮಧ್ಯ ಕ್ಷೇತ್ರೀಯ ಸಂಘಚಾಲಕರಾದ ವಿ.ನಾಗರಾಜರವರು ಭಾಗವಹಿಸಿ ಮಾರ್ಗದರ್ಶನ ಮಾಡಿದರು.


ಸಂಪುಟ : 44 ಸಂಚಿಕೆ : 1 ಶುಭಕೃತ್ – ಚೈತ್ರ ಕಲಿಯುಗಾಬ್ದ 5124 15-04-2022 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ಹಿಂದೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅನ್ಯಮತೀಯರ ಆರ್ಥಿಕ ಬಹಿಷ್ಕಾರ : ಒಂದು ಚರ್ಚೆ

ಇತ್ತೀಚಿನ ಕೆಲವು ದಿನಗಳಿಂದ ಹಿಂದೂ ಸಮಾಜದಲ್ಲಿ ಒಂದು ಹೊಸ ಬದಲಾವಣೆಯನ್ನು ಗಮನಿಸಬಹುದು. ಅದರಲ್ಲಿಯೂ ಹಿಂದೂ ಧಾರ್ಮಿಕ ಕ್ಷೇತ್ರದಲ್ಲಿ ಈ ಬದಲಾವಣೆ ಹೆಚ್ಚಾಗಿ ಕಾಣಬಹುದು. ಅದು ಮುಸಲ್ಮಾನ ವ್ಯಾಪಾರಿಗಳನ್ನು ನಮ್ಮ ಧಾರ್ಮಿಕ ಕ್ಷೇತ್ರಗಳಲ್ಲಿ, ಜಾತ್ರಾ ಮಹೋತ್ಸವದಲ್ಲಿ ಅವರ ಭಾಗವಹಿಸುವಿಕೆಯನ್ನು ಹಿಂದೂ ಸಮಾಜ ಬಹಿಷ್ಕಾರ ಮಾಡಿದೆ. ಅದು ಶಿವಮೊಗ್ಗದ ಮಾರಿ ಜಾತ್ರೆಯಾಗಿರಬಹುದು ಅಥವಾ ಕರಾವಳಿಯ ಅನೇಕ ಧಾರ್ಮಿಕ ಕ್ಷೇತ್ರಗಳಿರಬಹುದು. ಇಲ್ಲೆಲ್ಲ ಅನ್ಯಮತೀಯರನ್ನ ಬಹಿಷ್ಕಾರ ಮಾಡುವ ಪರಿಪಾಠ ಆರಂಭವಾಗಿದೆ.

ಇದೇನು ಧಿಗ್ಗಂದು ರಾತ್ರೋರಾತ್ರಿ ಆದ ಬದಲಾವಣೆಯೂ ಅಲ್ಲ. ಸದ್ಯಕ್ಕೆ ಈ 'ದ ಕಾಶ್ಮೀರ ಫೈಲ್ಸ್' ಚಲನಚಿತ್ರ, ಹರ್ಷ ಕೊಲೆ ಪ್ರಕರಣ ಮತ್ತು ಕರ್ನಾಟಕದಲ್ಲಿ ಭುಗಿಲೆದ್ದ ಹಿಜಾಬ್ ಗಲಭೆ ಈ ಮೂರೂ ವಿಷಯಗಳು ಹಿಂದುಗಳನ್ನು ಎಚ್ಚರಗೊಳಿಸುವಲ್ಲಿ ಸ್ವಲ್ಪ ಮಟ್ಟಿಗೆ ಸಹಕಾರಿಯಾಗಿದೆ. ಹಿಂದೂಗಳು ಮೈಮರೆವಿನಿಂದ ಎಚ್ಚೆತ್ತುಕೊಳ್ಳುತ್ತಿದ್ದಾರೆ. ಇಲ್ಲಿ ಯಾರು ಈ ನೆಲದ ಕಾನೂನಿಗೆ ಗೌರವ ನೀಡುವುದಿಲ್ಲವೋ ಅವರನ್ನು ಹಿಂದೂ ಸಮಾಜ ಸಹಿಸುವುದಿಲ್ಲ ಎಂಬ ಸ್ಪಷ್ಟ ಸಂದೇಶದೊಂದಿಗೆ ಸಮಾಜ ಒಂದುಗೂಡುತ್ತಿದೆ. ಅದು ಯಾವುದೇ ಸಮುದಾಯದ ಮೇಲಿನ ದ್ವೇಷವಲ್ಲ. ಬದಲಾಗಿ ಒಗ್ಗಟ್ಟಿನ ಮಂತ್ರವನ್ನು ಮುರಿದವರನ್ನು ಬಿಟ್ಟು ಮುಂದೆ ಹೋಗುವ ಪ್ರಯತ್ನ ಅಷ್ಟೆ.

ಕರ್ನಾಟಕದ ಬೇಲೂರು ಹಳೆಬೀಡು ಸೋಮನಾಥಪುರ ಇದಲ್ಲದೆ ಸವದತ್ತಿ, ಮಾರಿಕಾಂಬಾ, ಧರ್ಮಸ್ಥಳ ಹೀಗೆ ಧಾರ್ಮಿಕ ಕ್ಷೇತ್ರಗಳಲ್ಲಿ ದೇವಸ್ಥಾನದ ಕಾರಣಕ್ಕೆ ನಡೆಯುವ ಅಂಗಡಿಗಳು, ಮಳಿಗೆ ಹಾಕುವ ಮುಸಲ್ಮಾನ ಅಂಗಡಿಗಳು ಹಿಜಾಬ್ ಪ್ರಕರಣದ ತೀರ್ಪು ಬಂದಾಗ ಕರ್ನಾಟಕ ಬಂದ್ ಮಾಡಿದ್ದರು. ಅಂದರೆ ಈ ದೇಶದ ಮೂಲ ಸಂವಿಧಾನವನ್ನೇ ಅವರ ಪರವಾದ ತೀರ್ಪು ಕೊಡದ ಕಾರಣಕ್ಕೆ ಧಿಕ್ಕರಿಸುವ ಸಹಬಾಳ್ವೆಗೆ ಒಗ್ಗದ ಮನಸ್ಥಿತಿಗೆ ಬರುವ ಮೂಲಕ ಸಮಾಜದೊಂದಿಗೆ ಒಟ್ಟಿಗೆ ಬೆರೆಯುವ ರೀತಿಗೆ ಹಿಮ್ಮುಖವಾಗಿದ್ದಾರೆ. "ನಾವು ಸಂವಿಧಾನವನ್ನು ನ್ಯಾಯಾಲಯ ಆದೇಶವನ್ನು ಮತ್ತು ಹಿಂದುಗಳನ್ನು ವಿರೋಧಿಸುತ್ತೇವೆ, ಅಗತ್ಯವಿದ್ದಲ್ಲಿ ಮಾರಣಾಂತಿಕ ಹಲ್ಲೆ ಮಾಡುತ್ತೇವೆ ಇನ್ನೊಂದು ಕಾಶ್ಮೀರ ಫೈಲ್ಸ್ ಮಾಡಲು ಸಿದ್ದ" ಎಂದು ಕೆಲವರು ಪರೋಕ್ಷವಾಗಿ ಹೇಳಿದ್ದಾರೆ. ಅಂದರೆ ಸಂವಿಧಾನದ ಕಾರ್ಯದಂತೆ ನಡೆಯುವ ನ್ಯಾಯಾಲಯದಲ್ಲಿ ಅವರ ಪರವಾದ ವಿಚಾರಧಾರೆಗಳಿಲ್ಲದಾಗ ಯಾವ ಹಂತಕ್ಕೆ ಬೇಕಾದರೂ ಹೋಗುವ ಮನಸ್ಥಿತಿ ಮುಂದಿನ ದಿನಗಳಲ್ಲಿ ಬಹಳ ಅಪಾಯಕಾರಿಯಾಗಲಿದೆ.

ಇದನ್ನು ಮನಗಂಡಿರುವ ಹಿಂದೂ ಸಮಾಜ ಮೌನವಾಗಿ ತನ್ನ ಪ್ರತಿಭಟನೆಯನ್ನು ತೋರುತ್ತಿದೆ, ಕರ್ನಾಟಕದಲ್ಲಿ ಇತ್ತೀಚಿನ ಕೆಲ ದಿನಗಳಲ್ಲಿ ಹಿಂದೂ ಧಾರ್ಮಿಕ ಕ್ಷೇತ್ರದಲ್ಲಿ ಹಿಂದುಯೇತರರಿಗೆ ಅವಕಾಶವಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಹಿಂದೂ ಧಾರ್ಮಿಕ ಕ್ಷೇತ್ರಗಳು ಹೇಳುತ್ತಿರುವುದು ಸ್ವಾಗತಾರ್ಹ. ಅಲ್ಲದೆ, ಹಿಂದೂ ಸಮಾಜ ಆರ್ಥಿಕವಾಗಿ ಸಬಲವಾಗಿದೆ. ಯಾವುದೇ ಅನ್ಯಮತೀಯರ ಸಹಕಾರವಿಲ್ಲದೆಯೂ ಸಮಾಜ ಅಳುಕಿಲ್ಲದೆ ಬದುಕಬಲ್ಲದು. ಅಲ್ಲದೆ ಹೀಗೆ ಮಾಡುವುದರಿಂದ ಹಿಂದೂ ಸಮಾಜದ ಒಳಗೆ ಉದ್ಯೋಗ,ಉದ್ಯಮಗಳನ್ನು ಹೆಚ್ಚುಗೊಳಿಸಲು ಪ್ರೋತ್ಸಾಹ ನೀಡಿದಂತಾಗುತ್ತದೆ.ಒಂದು ಸಮಾಜವಾಗಿ ನಾವು ನಮ್ಮ ಸಮಾಜದ ಹಿತ ಚಿಂತನೆ ನಡೆಸುವುದರಲ್ಲಿ ತಪ್ಪಿಲ್ಲ.

ಹೀಗೆ ಧಾರ್ಮಿಕ ಕ್ಷೇತ್ರದಲ್ಲಿ ಹಿಂದೂಯೇತರರಿಗೆ ಅವಕಾಶವಿಲ್ಲ ಎಂದಾಗ ಹಿಂದುಯೇತರ ಸಣ್ಣ ವ್ಯಾಪರಿಗಳು "ನಮ್ಮ ಹೊಟ್ಟೆ ಮೇಲೆ ಹೊಡಿಬೇಡಿ ನಾವು ನಿಮ್ಮ ದ್ವೇಷಿಗಳಲ್ಲ" ಎಂದು ಪತ್ರಿಕಾ ಗೋಷ್ಠಿ ನಡೆಸಿ ಮೊಸಳೆ ಕಣ್ಣೀರು ಹಾಕುತ್ತಿದ್ದಾರೆ. ಆದರೆ ನೆನಪಿರಲಿ, ಈ ಸಣ್ಣ ವ್ಯಾಪಾರಿಗಳು ಮೊನ್ನೆ ನಡೆದ ಕರ್ನಾಟಕ ಬಂದ್‌ಗೆ




ಪೂರ್ಣ ಬೆಂಬಲ ಸೂಚಿಸಿದ್ದರು, ಈ ಅನ್ಯ ಮತೀಯರ ಕಣ್ಣೀರಿಗೆ ಕರಗಬೇಕೆನಿಸಿದರೂ ಸಂವಿಧಾನದ ಎದುರು, ಸಾಮರಸ್ಯದ ಎದುರು ತಲೆ ಬಾಗದವರ ಜೊತೆಗೆ ನಮ್ಮ ವ್ಯವಹಾರವಿಲ್ಲ ಎಂದು ಪೂರ್ಣ ಪ್ರಮಾಣದಲ್ಲಿ ಆರ್ಥಿಕವಾಗಿ ದೂರವಿಡುವ ಅಗತ್ಯವಿದೆ. ನಾವು ತಕ್ಷಣಕ್ಕೆ ಮಾಡಬೇಕಾಗಿರುವುದು, ಅನ್ಯಧರ್ಮಿಯರ ಬಳಿ ನಮ್ಮ ವ್ಯಾಪಾರ ವ್ಯವಹಾರವನ್ನು ತಕ್ಷಣವಾಗಿ ನಿಲ್ಲಿಸಿ ಹಿಂದೂಗಳೊಟ್ಟಿಗಿನ ವ್ಯವಹಾರವನ್ನು ಹೆಚ್ಚಾಗಿ ನಡೆಸುವುದೇ ಆಗಿದೆ. ಇದರಿಂದ ಒಂದು ಸಂವಿಧಾನ ವಿರೋಧಿ ಮನಸ್ಥಿತಿಗೆ ಸಾತ್ವಿಕ ಪ್ರತಿಭಟನೆಯನ್ನು ಮತ್ತು ಹಿಂದೂ ಸಮಾಜದ ಆರ್ಥಿಕ ಪರಿಸ್ಥಿತಿಯ ಸುಧಾರಣೆಯನ್ನು ಮಾಡಿದಂತಾಗುತ್ತದೆ.

ಇತ್ತೀಚೆಗೆ ಹಲಾಲ್ ಕಟ್ ಜಟ್ಕಾ ಕಟ್‌ನ ಗಲಾಟೆಯೂ ಆರಂಭವಾಗುತ್ತಿದೆ, ಅಲ್ಲಾಹನಿಗೆ ಸಮರ್ಪಿಸಿ ಪ್ರಾಣಿಯ ಗಂಟಲ ನಾಳಗಳನ್ನು ಸೀಳಿ, ಅದರೊಳಗಿನ ರಕ್ತವನ್ನೆಲ್ಲ ತೆಗೆದು ನಂತರ ವಧೆ ಮಾಡುವ ಪದ್ಧತಿ ಹಲಾಲ್ ಕಟ್ ಆಗಿದೆ. ಕೇವಲ ಇಷ್ಟೇ ಅಲ್ಲ ಬದಲಾಗಿ ಎಲ್ಲಾ ಕ್ಷೇತ್ರದಲ್ಲೂ ಹಲಾಲ್‌ನ ಬೇಡಿಕೆ ಇಡಲಾಗುತ್ತಿದೆ, ಅದು ಔಷಧ, ಪ್ರಸಾಧನ, ಬಟ್ಟೆ ಹೀಗೆ ಎಲ್ಲದಕ್ಕೂ ಹಲಾಲ್ ಸರ್ಟಿಫೈ ಬೇಕೇ ಬೇಕು ಎನ್ನುವ ಅವರ ಹಲಾಲ್ ಎಕಾನಾಮಿಕ್ ಮಾಡೆಲ್ ಜಗತ್ತಿನ ಒಟ್ಟು ಶೇ25ರಷ್ಟಿರುವ ಮುಸಲ್ಮಾನ ಸಮುದಾಯವನ್ನು ಬಳಸಿಕೊಂಡು ಅದರ ಆರ್ಥಿಕ ಲಾಭವನ್ನು ಪಡೆದುಕೊಳ್ಳುವ ತಂತ್ರ. ಹೀಗಿರುವಾಗ ಅವರಿಗೆ ಹಿಂದೂ ಧಾರ್ಮಿಕ ಕ್ಷೇತ್ರದಲ್ಲಿ ಯಾಕೆ ಅವಕಾಶ ಮಾಡಿಕೊಟ್ಟು ಆ ಸಮುದಾಯವನ್ನು ಅಭಿವೃದ್ಧಿ ಮಾಡಬೇಕು? ಹಿಂದೂ ಸಮಾಜದ ಬಡವರಿಗೇ ಆ ಅವಕಾಶ ದೊರೆಯಲಿ!

## ಆರ್ಥಿಕವಾಗಿ ದಿಗ್ಬಂಧನ ಮಾಡುವ ಅಗತ್ಯ ಏನು?

ಒಮ್ಮೆ ಅವಲೋಕಿಸಿ, ತಿರುಮಲ ದೇವಸ್ಥಾನ ಜಗತ್ತಿನ ಅತ್ಯಂತ ಶ್ರೀಮಂತ ದೇವಸ್ಥಾನ, ಆದರೆ ವಾಸ್ತವವಾಗಿ ಅಲ್ಲಿ ಇಂದು ಇರುವ ಸರ್ಕಾರದ ಪ್ರಭಾವದಿಂದ ದೇವಸ್ಥಾನ ಆಡಳಿತ ಜವಾಬ್ದಾರಿಯನ್ನು ಹಿಂದೂ ಧರ್ಮದಿಂದ ಮತಾಂತರಗೊಂಡವರಿಗೆ ವಹಿಸಿರುವುದು ನಮಗೆಲ್ಲಾ ಗೊತ್ತಿರದ ವಿಚಾರವೇನಲ್ಲ, ಅಲ್ಲಿ ಇರುವ ಸರ್ಕಾರ ಮತಾಂತರಕ್ಕೆ ಕುಮ್ಮಕ್ಕು ನೀಡುತ್ತಿದೆ. ತಿರುಪತಿಯಲ್ಲಿ ಇರುವ ವಿಶ್ವ ವಿದ್ಯಾನಿಲಯದಲ್ಲಿ ಅನ್ಯಧರ್ಮಿಯರು ತಿಮ್ಮಪ್ಪನ, ಪದ್ಮಾವತಿಯ ಭಾವಚಿತ್ರವನ್ನು ಹಾಕಲು ವಿರೋಧಿಸಿದ್ದಾರೆ. ಅಂದರೆ ಅಲ್ಲೊಂದು ಸಾಂಸ್ಕೃತಿಕ ಪಲ್ಲಟವಾಗಿದೆ. ಇದೇ ಪರಿಸ್ಥಿತಿಯನ್ನು ನೀವು ಯಾವುದಾದರೂ ಮಸೀದಿಯಲ್ಲೋ ಚರ್ಚಿನಲ್ಲೋ ನಡೆಸಲು ಸಾಧ್ಯವಿದೆಯಾ? ಜಾಮಿಯಾ ಇಸ್ಲಾಮಿಯಾ ಯೂನಿವರ್ಸಿಟಿಯಲ್ಲಿ ಗಣಪತಿ ಹಬ್ಬವೋ ಹೋಲಿಯೋ ಆಡಲು ಅವಕಾಶ ದೊರೆಯುತ್ತದೆಯೇ? ಅದನ್ನು ಕಡಿಮೆ ಮಾಡಲು ಪ್ರತಿಭಟಿಸಲು ಇರುವ ಸಾತ್ವಿಕ ಅವಕಾಶ ಆರ್ಥಿಕ ದಿಗ್ಬಂಧನ. ಹಾ! ಇದಕ್ಕೂ ಬಡತನ, ಮಾನವೀಯತೆಯ ಮೊಸಳೆ ಕಣ್ಣೀರು ಅದಾಗಲೇ ಶುರುವಾಗಿದೆ.

ಉಡುಪಿಯಲ್ಲಿ ಕೆಲವು ಸಮಯದ ಹಿಂದೆ ಗಂಗೊಳ್ಳಿಯಲ್ಲಿ ಗೋಹತ್ಯೆಯನ್ನು ವಿರೋಧಿಸಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡರು ಎಂಬ ಒಂದೇ ವಿಚಾರಕ್ಕೆ ಬಡ ಹಿಂದೂ ಮೀನು ಮಾರಾಟಗಾರರನ್ನ ಬಹಿಷ್ಕಾರ ಮಾಡಿದ್ದರಲ್ಲ, ಆಗ ಈ ಮಾನವೀಯತೆ, ಬಡತನದ ನಾಟಕಗಳು ಯಾಕೆ ಹೊರಬರಲಿಲ್ಲ? ಅವತ್ತು ಬಡ ಮೀನುಗಾರರ ಹೊಟ್ಟೆಯ ಹಸಿವಿನ ಕೂಗು ತಟ್ಟಲಿಲ್ಲ ಯಾಕೆ? ಹಾಗಾದರೆ ಮುಸಲ್ಮಾನರಿಗೊಂದು ಹಿಂದೂಗಳಿಗೊಂದು ನ್ಯಾಯ ಯಾಕೆ?

ಮಾನ್ಯ ಎಸ್.ಎಂ ಕೃಷ್ಣಾ ಅವರು ಮುಖ್ಯ ಮಂತ್ರಿಯಾಗಿದ್ದಾಗ ಮಾಡಿದ್ದ "ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮ, 2002"ರ ಅನ್ವಯ ಧಾರ್ಮಿಕ ಕ್ಷೇತ್ರಗಳಲ್ಲಿ ಅಲ್ಲಿನ ಸಂಸ್ಥೆಯ ಸುತ್ತಮುತ್ತಲಿನ ಸ್ವತ್ತುಗಳನ್ನು ಹಿಂದೂಗಳಲ್ಲದವರಿಗೆ ಗುತ್ತಿಗೆ ನೀಡುವಂತಿಲ್ಲ ಎಂದೂ ಮತ್ತು ಹಾಗೆ ಗುತ್ತಿಗೆ ತೆಗೆದುಕೊಂಡವರು ದೇವಸ್ಥಾನದ, ಭಕ್ತವೃಂದದ ಭಾವನೆಗಳಿಗೆ ಧಕ್ಕೆ ಬರುವ, ಆವರಣದ ಪಾವಿತ್ರ್ಯತೆಗೆ ಧಕ್ಕೆ ಬರುವ ವ್ಯವಹಾರಗಳನ್ನು ನಡೆಸತಕ್ಕದಲ್ಲ ಎಂದಿದೆ, ಸದ್ಯ ಈಗಿನ ಪರಿಸ್ಥಿತಿಯಲ್ಲಿ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ನೋವಾಗಿರುವುದರಿಂದ ಈ ರೀತಿ ಮಾಡಿರುವುದು ಸರಿಯಾಗಿಯೇ ಇದೆ.

ರಸ್ತೆ ಬದಿಯಲ್ಲಿ ಹಣ್ಣು ಮಾರುವ ಬಾಂಧವ ಮೊದಲು ಹಣ್ಣುಗಳ ಮೇಲೆ ಉಗುಳಿ ಆ ಹಣ್ಣುಗಳನ್ನು ನಿಮಗೆ ಮಾರುತ್ತಾನೆ. ಹಲಾಲ್ ಮಾಂಸವನ್ನು ಹಿಂದೂಗಳಿಗೆ ಮಾರುತ್ತಾರೆ. ಅಲ್ಲಾನ ಹೆಸರು ಹೇಳಿ ಮಾಂಸ ತಿನ್ನುವ ದರ್ದು ಹಿಂದೂಗಳಿಗೆ ಖಂಡಿತ ಬೇಡ. ಮುಸಲ್ಮಾನರ ಜೊತೆ ವ್ಯಾಪಾರ ವ್ಯವಹಾರ ಮಾಡದಿದ್ದರೂ ಹಿಂದೂಗಳು ತಮ್ಮ ಜೀವನವನ್ನು ನಡೆಸುವಷ್ಟು ಹಿಂದೂ ಸಮಾಜ ಶಕ್ತವಾಗಿದೆ.

ಬಾಲಿವುಡ್‌ನಲ್ಲಿ ತೋರಿಸುವ ಯಾವ ಚಿತ್ರದಲ್ಲಿಯೂ ಜೈ ಶ್ರೀರಾಮ್ ಅನ್ನುವುದಿಲ್ಲ. ಅಂದರೂ ಅಲ್ಲೊಂದು ವ್ಯಂಗ್ಯ ತರುತ್ತಾನೆ, ಬದಲಿಗೆ ಆಜಾನ್ ಕೇಳಿಸುತ್ತಾನೆ, ಕನಿಷ್ಠ ನಾಲ್ಕು ಬಾರಿಯಾದರೂ ಇನ್ಶಲ್ಲ ಅನ್ನುತ್ತಾನೆ, ಅಲ್ಲಿ ಭಗವಂತ ಅನ್ನುವ ಬದಲಿಗೆ ಖುದಾ, ರಬ್ಬಾ ಎನ್ನುತ್ತಾನೆ. ನಮ್ಮೊಳಗೆ ಸಾಫ್ಟ್ ಇಸ್ಲಾಮನ್ನು ಇಂಜೆಕ್ಟ್ ಮಾಡುತ್ತಾರೆ. ಈ ರೀತಿಯಲ್ಲಿ ಸಮ್ಮೋಹನಕ್ಕೆ ಒಳಗಾಗಲು ನಾವು ದುಡ್ಡು ಕೊಟ್ಟು ನೋಡುವ ಅಗತ್ಯತೆ ಇದೆಯೆ? ನಮ್ಮ ದೇವರ, ಆಚರಣೆಗಳ, ಸಂಸ್ಕಾರಗಳ ಪರಿಧಿಯನ್ನು ವ್ಯಂಗ್ಯವಾಗಿ ತೋರಿಸುವುದಕ್ಕೆ ನಾವೇ ನಾವಾಗಿ ಬ್ರೇನ್ ವಾಶ್ ಆಗದಂತೆ ತಡೆಯಲು ಇರುವ ಏಕೈಕ ಮಾರ್ಗ ಆರ್ಥಿಕ ಬಹಿಷ್ಕಾರ.


ಹುತ್ತಕ್ಕೆ ಹಾಲು, ಅಭಿಷೇಕಕ್ಕೆ ಹಾಲು ಕೊಡುವುದಕ್ಕಿಂತ ಅನಾಥಮಕ್ಕಳಿಗೆ ಕೊಡಿ ಎಂದು ಹೇಳುತ್ತಾರೆ. ಆದರೆ ಗೋರಿಯ ಮೇಲೆ ಹಾಕುವ ಚಾದರ್ ಬಡವನಿಗೆ ಕೊಡಿ ಎಂದು ಹೇಳಿದ್ದು ಕೇಳಿದ್ದೀರಾ? ಅಂದರೆ ಹಿಂದೂ ಆಚರಣೆಗಳ ವಿಚಾರಕ್ಕೆ ಬಂದಾಗ ಸೇವೆ ಸಹಾಯ ಅನ್ನುವ ಹಣೆಪಟ್ಟಿ ಬಂದುಬಿಡುತ್ತದೆ. ಅಂದರೆ ಒಟ್ಟಾರೆ, Masjid economy prevails degula economics.

ಈಗಲೂ ಸಮಯ ಮಿಂಚಿಲ್ಲ, ಹಿಂದೂಗಳು ಒಟ್ಟಾಗಬೇಕು. ಅನ್ಯಧರ್ಮಿಯರಿಗೆ ಆರ್ಥಿಕ ಬಹಿಷ್ಕಾರ ಹಾಕುವುದರಿಂದ ಅವರ ಬಲವನ್ನು ತಗ್ಗಿಸಿದಂತಾಗುತ್ತದೆ. ಸಂವಿಧಾನ ವಿರೋಧಿಗಳಿಗೆ ತಕ್ಕ ಪಾಠ ಕಲಿಸಿದಂತಾಗುತ್ತದೆ. ಹೀಗೆ ನಮ್ಮ ಧರ್ಮವನ್ನು ನಾವು ಕಾಪಾಡಿಕೊಳ್ಳಲು ನಾವು ಸಾತ್ವಿಕವಾದ ಪ್ರತಿಭಟನೆಯನ್ನೂ ಮಾಡದಿದ್ದರೆ, ನಾವು ಅವರನ್ನು ನಿರ್ದಾಕ್ಷಿಣ್ಯವಾಗಿ ದೂರವಿಡದಿದ್ದರೆ, "ನಮ್ಮ ಕುತ್ತಿಗೆ ಅವರ ಕತ್ತಿಗೆ" ಎಂಬ ಸ್ಥಿತಿಗೆ ತಲುಪಬೇಕಾಗುತ್ತದೆ. ಅದಾಗಲೇ ಪೂರ್ವ ಬಂಗಾಲ, ಕಾಶ್ಮೀರದ ಹಿಂದೂಗಳ ಪರಿಸ್ಥಿತಿ ನಮಗೆ ಪಾಠ ಕಲಿಸಬೇಕು. ಹಿಂದೂಗಳು ಇನ್ನಾದರೂ ಎಚ್ಚೆತ್ತುಕೊಳ್ಳಬೇಕು.

– **ಕಿಶೋರ್ ಪಟವರ್ಧನ್**, ಸ್ವದೇಶಿ ಜಾಗರಣ ಮಂಚ್

## ಸಂಸ್ಮರಣೆ

# ಲಾಲಾ ಲಜಪತ್ ರಾಯ್ (28ನೇ ಜನವರಿ, 1865 – 17ನೇ ನವೆಂಬರ್ 1928)



ಲಾಲಾ ಲಜಪತ್ ರಾಯ್ ಪಂಜಾಬ್ ಪ್ರಾಂತ್ಯದ ಫಿರೋಜಪುರ ಜಿಲ್ಲೆಯ ಡುಡಿಕೆ ಎಂಬ ಹಳ್ಳಿಯಲ್ಲಿ 1865ರ ಜನವರಿ 28 ರಂದು ಜನಿಸಿದರು. ಇವರ ತಂದೆ ಲಾಲಾ ರಾಧಾಕಿಷನ್ ಸರಕಾರಿ ಪಾಠಶಾಲೆಯಲ್ಲಿ ಉರ್ದು ಉಪಾಧ್ಯಾಯರಾಗಿದ್ದರು. ಸ್ವಾತಂತ್ರ್ಯ ಪ್ರೇಮ ಹಾಗೂ ಆತ್ಮಾಭಿಮಾನಕ್ಕೆ ಹೆಸರಾದ ಅಗರವಾಲ ಮನೆತನಕ್ಕೆ ಸೇರಿದವರು. ಲಜಪತ್ ರಾಯ್ ಅವರ ತಾಯಿ ಗುಲಾಬ್ದೇವಿ.

ರಾಯ್ ಅವರ ಪ್ರಾರಂಭಿಕ ಶಿಕ್ಷಣ ಪ್ರಸಕ್ತದಲ್ಲಿ ಹರ್ಯಾಣದಲ್ಲಿರುವ ರೆವಾರಿ ಎಂಬ ಊರಿನಲ್ಲಾಯಿತು. ಲಜಪತ್ ರಾಯ್ ಅವರ ತಂದೆ ರಾಧಾ ಕೃಷ್ಣನ್ ಅಂದಿನ ದಿನಗಳಲ್ಲಿ ಉರ್ದು ಶಿಕ್ಷಕರಾಗಿದ್ದರು. ಸಂಬಳವೂ ಅಷ್ಟಕ್ಕಷ್ಟೆ ಹಾಗಾಗಿ, ಬಡತನ ಮತ್ತು ಅನಾರೋಗ್ಯ ಅವರ ಉನ್ನತ ವ್ಯಾಸಂಗಗಳಿಗೆ ಅಡ್ಡಿಯಾಗಿದ್ದವು. ವಿದ್ಯಾರ್ಥಿ ವೇತನಗಳನ್ನು ಪಡೆದು ಓದಿ, 1880ರಲ್ಲಿ ಕಲ್ಕತ್ತಾ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆಯಲ್ಲಿ ಪ್ರಥಮ ದರ್ಜೆ ಪಡೆದರು. ಅದೇ ವರ್ಷ ಪಂಜಾಬ್ ವಿಶ್ವ ವಿದ್ಯಾನಿಲಯದ ಪ್ರವೇಶ ಪರೀಕ್ಷೆಯಲ್ಲಿಯೂ ತೇರ್ಗಡೆ ಹೊಂದಿದರು. ಅನಂತರ ಲಾಹೋರಿನ ಸರಕಾರಿ ಕಾಲೇಜು ಸೇರಿದರು. ಜೊತೆಯಲ್ಲಿಯೇ ನ್ಯಾಯಶಾಸ್ತ್ರದ ಓದು ಸಾಗಿತು. ಮನೆಯ ಆರ್ಥಿಕ ಪರಿಸ್ಥಿತಿಯ ಕಾರಣ ಓದು ಎರಡು ವರ್ಷಗಳ ಕಾಲ ನಿಂತು ಹೋಯಿತು.

1883ರಲ್ಲಿ ನ್ಯಾಯ ಶಾಸ್ತ್ರದ ಪ್ರಥಮ ಪರೀಕ್ಷೆ ಮುಗಿಸಿದ ಮೇಲೆ ಅವರು ಮುಖ್ತಾರ್ (ಚಿಕ್ಕ ವಕೀಲ) ಕೆಲಸಕ್ಕೆ ಅನುಮತಿ ಪಡೆದರು. ಮನೆಯ ನಿರ್ವಹಣೆಯ ಭಾರವೂ ಸಹ ಅವರಿಗಿತ್ತು. 18 ವರ್ಷದ ಲಾಲಾಜಿ, ಜಗ್ರಾಂವ್ ಪಟ್ಟಣದ ರೆವಿನ್ಯೂ ಕೋರ್ಟಿನಲ್ಲಿ ಮುಖ್ತಾರಿ ವೃತ್ತಿ ನಡೆಸಿದರು. 1889ರಲ್ಲಿ ಪ್ಲೀಡರ್ ಪರೀಕ್ಷೆ ಮುಗಿಸಿ, ದಕ್ಷಿಣ ಪಂಜಾಬಿನ ಹಿಸಾರ ಎಂಬಲ್ಲಿಗೆ ಬಂದು ವಕೀಲ ವೃತ್ತಿ ಪ್ರಾರಂಭಿಸಿದರು. ಹಣ ಗಳಿಸುವ ಇಚ್ಛೆ ಅಷ್ಟೇ ಅವರದಾಗಿರಲಿಲ್ಲ. ಇಟಲಿಯ ವೀರ ಕ್ರಾಂತಿಕಾರಿ ಮ್ಯಾಜಿನಿಯ ಜೀವನ ಚರಿತ್ರೆಯನ್ನು ಓದಬೇಕೆಂದು ಅವರಿಗೆ ಆಸೆಯಾಯಿತು. ಭಾರತದಲ್ಲಿ ಅವರಿಗೆ ಆ ಪುಸ್ತಕ ದೊರೆಯಲಿಲ್ಲ. ಇಂಗ್ಲೆಂಡಿನಲ್ಲಿದ್ದ ಸ್ನೇಹಿತರೊಬ್ಬರಿಗೆ ಬರೆದು ತರಿಸಿಕೊಂಡರು. ಆ ವೀರರ ಸಾಹಸ ಪ್ರವೃತ್ತಿ, ಉದಾರ ಸ್ವಭಾವ ದೇಶಾಭಿಮಾನ ಅವರನ್ನು ರೋಮಾಂಚನಗೊಳಿಸಿದವು.

ಸ್ವಾಮಿ ದಯಾನಂದ ಮರಣದ ನಂತರ ಲಾಲಾಜಿ ತಮ್ಮ ಸಹೋದ್ಯೋಗಿಗಳೊಂದಿಗೆ ದಯಾನಂದ ಆಂಗ್ಲೋ ವೇದಿಕ್ ಕಾಲೇಜಿನ (ಡಿ.ಎ.ವಿ. ಕಾಲೇಜು) ಅಭ್ಯುದಯಕ್ಕಾಗಿ ದುಡಿದರು. ಆರ್ಯಸಮಾಜದ ಮೂರು ಧ್ಯೇಯಗಳು ಸಮಾಜ ಸುಧಾರಣೆ, ಹಿಂದೂ ಧರ್ಮದ ಏಳಿಗೆ ಮತ್ತು ವಿದ್ಯಾಭಿವೃದ್ಧಿ. ಲಾಲಾಜಿಯವರ ಮಾಸಿಕ ವರಮಾನ ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಾಗಿತ್ತು. ತಂದೆ ನಿರಾತಂಕವಾಗಿರುವಂತೆ ಒಂದಿಷ್ಟು ಹಣವನ್ನು ತೆಗೆದಿಟ್ಟು, ಅದರ ಮೇಲಿನ ಬಡ್ಡಿ ತಂದೆಗೆ ಸಲ್ಲುವಂತೆ ಏರ್ಪಾಡು ಮಾಡಿದರು. ಅವರ ಆದಾಯದಲ್ಲಿ ಹತ್ತರಲ್ಲೊಂದು ಪಾಲು ದೇಶಕ್ಕೆ ಮೀಸಲು. ಅವಿಶ್ರಾಂತವಾಗಿ ಕೆಲಸ ಮಾಡಿ ಆರ್ಯ ಸಮಾಜದ ಶಾಖೆಗಳನ್ನು ಸ್ಥಾಪಿಸಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದರು. ಅವರು ಜಾತಿಪರ ವ್ಯಕ್ತಿಯಾಗಿರಲಿಲ್ಲ. ಮುಸ್ಲಿಮರು ಅಧಿಕವಾಗಿದ್ದ ಕ್ಷೇತ್ರದಿಂದ ಪುರಸಭೆಯ ಸಮಿತಿಗೆ ಅವಿರೋಧವಾಗಿ ಚುನಾಯಿತರಾದರು.

ಹಿಂದೂ ಧರ್ಮ ಮತ್ತು ಮನುಸ್ಮೃತಿಗಳಿಂದ ತೀವ್ರ ಪ್ರಭಾವಿತರಾದ ಲಾಲಾ ಲಜಪತ ರಾಯ್ ರಾಜಕೀಯ ಹೋರಾಟ ಮತ್ತು ಬರವಣಿಗೆಗಳ ಕುರಿತು ಅಪಾರ ಒಲವು ಬೆಳೆಸಿಕೊಂಡರು. ಹಿಂದೂ ಮಹಾಸಭಾದ ನಿಷ್ಠಾವಂತ ಕಾರ್ಯಕರ್ತರಾಗಿದ್ದ ಅವರು, ಹಿಂದೂ ಧರ್ಮದಲ್ಲಿ ಶಾಂತಿಯುತ ಹೋರಾಟಕ್ಕೆ ಮಹತ್ವವಿದೆ ಎಂದು ನಂಬಿದ್ದರು. ಇದೇ ಆಧಾರದ ಮೇಲೆ ಅವರು ಭಾರತದ ಸ್ವಾತಂತ್ರ್ಯಕ್ಕಾಗಿ ಅನೇಕ ಶಾಂತಿಯುತ ಚಳುವಳಿಗಳನ್ನು ಆಯೋಜಿಸತೊಡಗಿದರು.

ಆರ್ಯ ಸಮಾಜದಲ್ಲಿ ನಿಷ್ಠೆ ಹೊಂದಿದ್ದ ರಾಯ್ ಅವರು ತಾವು ವಿದ್ಯಾರ್ಥಿಯಾಗಿದ್ದ 'ಆರ್ಯ ಗೆಜೆಟ್'ನ ಸಂಪಾದಕರಾಗಿದ್ದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೇರಿದ ಮೇಲೆ ಅವರು ಪಂಜಾಬಿನಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಪ್ರಾರಂಭಿಸಿದರು. ಇದರಿಂದಾಗಿ ಬ್ರಿಟಿಷ್ ಆಡಳಿತ ಅವರನ್ನು ಬರ್ಮಾದ ಮಂಡಾಲೆ ಎಂಬಲ್ಲಿಗೆ ಗಡಿಪಾರು ಮಾಡಿತು. ಕೆಲವು ತಿಂಗಳ ನಂತರದಲ್ಲಿ ಲಾರ್ಡ್ ಮಿಂಟೋ ಅವರಿಗೆ ಲಾಲಾ ಲಜಪತ ರಾಯ್ ಅವರ ವಿರುದ್ಧ ಇರುವ ಆರೋಪಗಳಿಗೆ ಸರಿಯಾದ ಸಾಕ್ಷ್ಯಾಧಾರಗಳಿಲ್ಲ ಎನಿಸಿ ಭಾರತಕ್ಕೆ ಹಿಂದಿರುಗಲು ಪರವಾನಗಿ ನೀಡಿದರು.

ಲಾಲಾ ಲಜಪತ ರಾಯ್ ಅವರು ತಮ್ಮ ತಾಯಿ 1927ರ ವರ್ಷದಲ್ಲಿ ನಿಧನರಾದಾಗ ಅವರ ಹೆಸರಿನಲ್ಲಿ ಗುಲಾಬಿ ದೇವಿ ಟ್ರಸ್ಟ್ ಸ್ಥಾಪಿಸಿ ಅನೇಕ ಸೇವಾ ಕಾರ್ಯಗಳನ್ನು ಆರಂಭಿಸಿದರು.

1928ರಲ್ಲಿ ಭಾರತದಲ್ಲಿನ ಪರಿಸ್ಥಿತಿಯನ್ನು ವರದಿ ಮಾಡಲು ನಿಯಮಿತಗೊಂಡಿದ್ದ ಸರ್ ಜಾನ್ ಸೈಮನ್ ನೇತೃತ್ವದ ಆಯೋಗದಲ್ಲಿ ಒಬ್ಬರೇ ಒಬ್ಬರೂ ಭಾರತೀಯ ಪ್ರತಿನಿಧಿಗಳು ಇರಲಿಲ್ಲ ಎಂಬ ನಿಟ್ಟಿನಲ್ಲಿ ಭಾರತೀಯ ಸಂಘಟನೆಗಳು ಅದನ್ನು ಬಹಿಷ್ಕರಿಸಲು ತೀರ್ಮಾನ ಕೈಗೊಂಡು ದೇಶದಾದ್ಯಂತ ಚಳುವಳಿಯನ್ನು ನಡೆಸಿದವು. 1928ರ ಅಕ್ಟೋಬರ್ 30ರಂದು ಸೈಮನ್ ಆಯೋಗವು ಲಾಹೋರಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಲಾಲಾ ಲಜಪತರಾಯ್ ಶಾಂತಿಯುತ ಮೆರವಣಿಗೆಯ ನೇತೃತ್ವ ವಹಿಸಿದರು.

ಆ ಸಂದರ್ಭದಲ್ಲಿ ಪೋಲಿಸ್ ಸೂಪರಿಂಟೆಂಡೆಂಟ್ ಜೇಮ್ಸ್ ಎ. ಸ್ಕಾಟ್ ಎಂಬ ದುರಹಂಕಾರಿಯು ಮೆರವಣಿಗೆಯಲ್ಲಿ ಹೋಗುತ್ತಿದ್ದವರ ಮೇಲೆ ಲಾಠಿ ಚಾರ್ಜ್ ಮಾಡುವ ಆದೇಶವಿತ್ತದ್ದೇ ಅಲ್ಲದೆ ಲಾಲಾ ಲಜಪತ ರಾಯ್ ಅವರ ಮೇಲೆ ಸ್ವಯಂ ಆಕ್ರಮಣ ನಡೆಸಿ ಅವರು ತೀವ್ರವಾಗಿ ಗಾಯಗೊಳ್ಳುವುದಕ್ಕೆ ಕಾರಣನಾದನು. ಈ ತೀವ್ರ ಪೆಟ್ಟುಗಳಿಂದ ಹೊರಬರಲಾಗದ ಲಾಲಾ ಲಜಪತ ರಾಯ್ ಅವರು 1928ರ ನವೆಂಬರ್ 17ರಂದು ಹೃದಯಾಘಾತದಿಂದ ನಿಧನರಾದರು. ಸ್ಕಾಟನ ಈ ದುಷ್ಕೃತ್ಯ ಮಹಾನ್ ದೇಶಭಕ್ತ, ವಿದ್ವಾಂಸ, ಅಹಿಂಸಾ ಪ್ರವೃತ್ತಿಯ ಶಾಂತಿದೂತರೆನಿಸಿದ್ದ ಲಾಲಾ ಲಜಪತ ರಾಯ್ ಅವರ ಮರಣಕ್ಕೆ ಕಾರಣವಾಯಿತು. ಇದರಿಂದ ತೀವ್ರವಾಗಿ ನೊಂದ ಭಗತ್ ಸಿಂಗ್, ರಾಜ ಗುರು, ಸುಖದೇವ್ ಥಾಪರ್, ಚಂದ್ರಶೇಖರ್ ಆಜಾದ್ ಅಂತಹ ವೀರರು ತೀವ್ರ ಹೋರಾಟಕ್ಕಿಳಿದು ದೇಶಕ್ಕೆ ಪ್ರಾಣಾರ್ಪಣೆ ಮಾಡಿದರು.

## ಎಲ್ಲೋ ಕೇಳಿದ ಕಥೆ

ಝೆನ್ ಮಾಸ್ಟರ್‌ನ ಆಶ್ರಮದಲ್ಲಿ ಝೆನ್ ಅಭ್ಯಾಸ ಮಾಡುತ್ತಿದ್ದ ಒಬ್ಬ ಯುವ ಸನ್ಯಾಸಿ ತನ್ನ ಕಲಿಕೆಯ ಅವಧಿ ಮುಗಿಯುತ್ತಿದ್ದಂತೆಯೇ ದೇಶಾಂತರ ಹೊರಟು ಬಿಟ್ಟ. ಸುತ್ತಾಟದಲ್ಲಿ ತಾನು ಕಂಡದ್ದನ್ನ ಮತ್ತು ತನ್ನ ಆಧ್ಯಾತ್ಮ ಕಲಿಕೆಯ ಪ್ರಗತಿಯನ್ನು ಪತ್ರದ ಮೂಲಕ ಮಾಸ್ಟರ್‌ಗೆ ತಿಳಿಸಬೇಕೆಂದು ಬಯಸಿದ.

ಆಶ್ರಮ ಬಿಟ್ಟು ಒಂದು ತಿಂಗಳಾದ ಮೇಲೆ ಮಾಸ್ಟರ್‌ಗೆ ಮೊದಲ ಪತ್ರ ಬರೆದ "ಮಾಸ್ಟರ್, ನನ್ನ ಪ್ರಜ್ಞೆ ವಿಸ್ತಾರಗೊಳ್ಳುತ್ತಿದೆ, ಬ್ರಹ್ಮಾಂಡದೊಂದಿಗೆ ಒಂದಾಗುತ್ತಿರುವ ಹಾಗೆ ಅನುಭವವಾಗುತ್ತಿದೆ"

ಪತ್ರ ಓದುತ್ತಿದ್ದಂತೆಯೇ ಮಾಸ್ಟರ್, ಪತ್ರ ಬಿಸಾಕಿ ಬಿಟ್ಟ.

ಎರಡನೇ ತಿಂಗಳ ಪತ್ರದಲ್ಲಿ ಶಿಷ್ಯ ಹೀಗೆ ಬರೆದಿದ್ದ, "ಸಮಸ್ತ ಚರಾಚರಗಳಲ್ಲಿ ಹುದುಗಿರುವ ದೈವಿಕತೆಯನ್ನು ನಾನು ಕಂಡುಕೊಂಡೆ"

ಪತ್ರ ಓದಿ ಮಾಸ್ಟರ್‌ಗೆ ತೀವ್ರ ಹತಾಶೆಯಾಯಿತು.

ಒಂದು ತಿಂಗಳ ನಂತರ ಮತ್ತೆ ಪತ್ರ ಬಂತು.

"ಪ್ರಕೃತಿಯ ರಹಸ್ಯ ನನ್ನ ದಿವ್ಯ ದೃಷ್ಟಿಗೆ ಗೋಚರವಾಯಿತು"

ಪತ್ರ ಓದಿ ಮಾಸ್ಟರ್, ಆಕಳಿಸಿದ.

ಎರಡು ತಿಂಗಳ ನಂತರ ಬಂದ ಪತ್ರದಲ್ಲಿ ಹೀಗೆ ಬರೆದಿತ್ತು "ಯಾರೂ ಹುಟ್ಟಿಲ್ಲ, ಯಾರೂ ಬದುಕುತ್ತಿಲ್ಲ, ಯಾರೂ ಸಾಯುವುದೂ ಇಲ್ಲ, ಏಕೆಂದರೆ ಆತ್ಮ ಒಂದು ಭ್ರಮೆ"

ಮಾಸ್ಟರ್‌ಗೆ ಎಷ್ಟು ನಿರಾಶೆಯಾಯಿತೆಂದರೆ ಛೇ ಎನ್ನುತ್ತ ಗಾಳಿಯಲ್ಲಿ ತನ್ನ ಕೈ ತೂರಿದ.

ಹೀಗೇ ಒಂದು ವರ್ಷ ಕಳೆಯಿತು, ಶಿಷ್ಯನಿಂದ ಪತ್ರಗಳು ಬರುತ್ತಲೇ ಇದ್ದವು. ಮಾಸ್ಟರ್‌ಗೆ ಸಮಾಧಾನವಾಗಲಿಲ್ಲ. ಶಿಷ್ಯನ ಕರ್ತವ್ಯಗಳನ್ನು ನೆನಪಿಸುತ್ತ, ಅವನ ಆಧ್ಯಾತ್ಮದ ಹಾದಿಯಲ್ಲಿನ ಸಮಸ್ಯೆಗಳನ್ನು ವಿವರಿಸಿ ಪತ್ರ ಬರೆದ. ಶಿಷ್ಯ ತಿರುಗಿ ಉತ್ತರ ಬರೆದ "ನಿಮ್ಮ ತಿಳುವಳಿಕೆ ಯಾರಿಗೆ ಬೇಕು?"

ಈ ಉತ್ತರ ಓದುತ್ತಿದ್ದಂತೆಯೇ, ಮಾಸ್ಟರ್ ಮುಖದಲ್ಲಿ ತೃಪ್ತಿ ಕಾಣಿಸಿಕೊಂಡಿತು.

"ಓಹ್! ಕೊನೆಗೂ ತಿಳಿದುಕೊಂಡುಬಿಟ್ಟ"


## ಭಾರತದ ಕಾಫೀ ರಫ್ತು ಹೆಚ್ಚಳ

ಭಾರತದಲ್ಲಿ ಬೆಳೆಯಲಾಗುವ ಕಾಫಿ ಇಡೀ ಜಗತ್ತಿಗೆ ಪೂರೈಕೆಯಾಗುತ್ತದೆ. ಪ್ರಸ್ತುತ ಭಾರತದ ಕಾಫಿ ರಫ್ತು ಶೇ.42ರಷ್ಟು ಹೆಚ್ಚಳವಾಗಿದೆ. ರಫ್ತು ಹೆಚ್ಚಳ ಭಾರತದ ಕಾಫಿ ಬೆಳೆಗಾರರಲ್ಲಿ ಹೊಸ ಭರವಸೆಯನ್ನು ಮೂಡಿಸಿದೆ. 2021–22ನೇ ಸಾಲಿನಲ್ಲಿ ಕಾಫಿ ರಫ್ತಿನಲ್ಲಿ ಶೇಕಡಾ 42ರಷ್ಟು ಹೆಚ್ಚಳವಾದ ಹಿನ್ನೆಲೆಯಲ್ಲಿ ಕಾಫಿ ಬೆಳೆಗಾರರು ಮತ್ತು ರಫ್ತುದಾರರು ಶತಕೋಟಿ ಡಾಲರ್ ಗಳಿಕೆ ಮಾಡಿ ಹೊಸ ದಾಖಲೆ ಬರೆದಿದ್ದಾರೆ.

2011–12 ರಿಂದ 2020–21ರ ನಡುವೆ ಭಾರತೀಯ ಕಾಫಿ ರಫ್ತಿನಲ್ಲಿ ವಾರ್ಷಿಕವಾಗಿ ಶೇಕಡಾ 3 ರಷ್ಟು ಇಳಿಕೆ ಕಂಡು ಬಂದಿದ್ದು ಕಳವಳಕ್ಕೆ ಕಾರಣವಾಗಿತ್ತು. ಆದರೆ 2021–22ನೇ ಸಾಲಿನಲ್ಲಿ ಕಾಫಿ ರಫ್ತಿನಲ್ಲಿ ಶೇಕಡಾ 42ರಷ್ಟು ಏರಿಕೆಯಾಗಿರುವುದು ಹೊಸ ಉತ್ಸಾಹವನ್ನು ತಂದುಕೊಟ್ಟಿದೆ.

ಈ ಬಗ್ಗೆ ಪಿಯುಷ್ ಗೊಯಲ್ ಅವರು ಪ್ರತಿಕ್ರಿಯಿಸಿ, "ಕಾಫಿ ಬೆಳೆಗಾರರು ಮತ್ತು ರಫ್ತುದಾರರು ಒಂದು ಶತಕೋಟಿ ಡಾಲರ್‌ಗಳಿಗೂ ಅಧಿಕ ಆದಾಯ ಗಳಿಸಿ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಜಗತ್ತು ಈಗ ಬೆಳಿಗ್ಗೆ ಏಳುವುದು ಭಾರತೀಯ ಕಾಫಿಯೊಂದಿಗೆ" ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

## ಪುಸ್ತಕ ಪರಿಚಯ




## ಕನ್ನಡದ ಕಡುಗಲಿಗಳು

ಲೇಖಕರು : ಶಿವರಾಮು
ಪ್ರಕಾಶಕರು : ರಾಷ್ಟ್ರೋತ್ಥಾನ ಸಾಹಿತ್ಯ
ಬೆಲೆ : 120/–

ಕನ್ನಡದ ನೆಲದಲ್ಲಿ ರಾಷ್ಟ್ರದ ಕಲೆ, ಸಂಸ್ಕೃತಿ, ಸಾಹಿತ್ಯಗಳ ಕೊಡುಗೆ ಅಪಾರ. ಅಂತೆಯೇ, ಕ್ಷಾತ್ರ ತೇಜದಲ್ಲಿ, ಬಲಿದಾನಗಳಲ್ಲಿಯೂ ಕನ್ನಡನಾಡು ಎಂದಿಗೂ ಹಿಂದೆ ಬಿದ್ದಿಲ್ಲ. ಅವರ ವೀರೋಚಿತವಾದ ಅಸಾಧಾರಣ ಚರಿತ್ರೆಯ ಪುಟಗಳನ್ನು ತಿರುವು ಹಾಕುವ ಕೆಲಸವನ್ನು ಈ ಪುಸ್ತಕ ಮಾಡಿದೆ. ಜೀವನದ ಪ್ರತಿಯೊಂದು ಹಂತದಲ್ಲಿ ತಮ್ಮ ಬಾಳಿನುದ್ದಕ್ಕೂ ಆದರ್ಶವನ್ನು ಕಡೆದು ನಿಲ್ಲಿಸಿದ, ಸ್ವಧರ್ಮ, ಸ್ವದೇಶ, ಸ್ವಾತಂತ್ರ್ಯಕ್ಕಾಗಿ ವೈರಿಗಳ ವಿರುದ್ಧ ಕೆಚ್ಚಿನಿಂದ ಕಾದಾಡಿದ ಕನ್ನಡದ ಗಂಡುಗಲಿಗಳ, ವೀರ ವನಿತೆಯರ ಭವ್ಯೋಜ್ವಲ ಸಂಸ್ಮರಣೆಯನ್ನು ಈ ಗ್ರಂಥದಲ್ಲಿ ಕಾಣಬಹುದು. ಅದು ಶ್ರೀ ರಾಮನ ಕಾರ್ಯಕ್ಕಾಗಿ ನಿಂತ ಹನುಮನಿಂದ ಹಿಡಿದು ಇತ್ತೀಚಿನವರೆಗೂ ಬದುಕಿದ ಮಹನೀಯರ ಚಿತ್ರವನ್ನು ಕಟ್ಟಿಕೊಡುವ ಮಹತ್ವದ ಕಾರ್ಯವನ್ನು ಈ ಪುಸ್ತಕ ಮಾಡಿದೆ.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್

# ಸಾಲುದ್ದದ ಸುದ್ದಿಗಳು



ಚೈತ್ರ ನವರಾತ್ರಿ ಹಾಗೂ ನೂತನ ಸಂವತ್ಸರದ ಶುಭಾರಂಭದ ನಿಮಿತ್ತ ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ಶ್ರೀ ರಾಮಜನ್ಮಭೂಮಿ ಮಂದಿರದ ಗರ್ಭಗೃಹದಲ್ಲಿ ಬೆಳಿಗ್ಗೆ ವಿಶೇಷ ಪೂಜೆಯನ್ನು ನೆರವೇರಿಸಲಾಯಿತು. ಪೂಜಾ ವಿಧಿವಿಧಾನಗಳು ಮುಗಿದ ಬಳಿಕ ಅಲ್ಲಿ ಹೊಸ ಭಗವಾಧ್ವಜವನ್ನು ಆರೋಹಣ ಮಾಡಲಾಯಿತು.

ಗ್ರಾಮೀಣ ಅಭಿವೃದ್ಧಿಯಲ್ಲಿ ಗೋವಿನ ಮಹತ್ವವನ್ನು ಸಾರಲು ಹೊಸ ಬಗೆಯ ಚಿಂತನೆಯನ್ನು ಅಳವಡಿಸಿಕೊಂಡು ಅದನ್ನು ಕಾರ್ಯರೂಪಕ್ಕೆ ತರಲಾಗಿ ವಿಶಿಷ್ಟವಾಗಿ ನಡೆದದ್ದು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಘಟಿಕೋತ್ಸವ. ವೇದಿಕೆಯು ಅತ್ಯಂತ ಸುಂದರವಾಗಿ, ಸೃಜನಾತ್ಮಕವಾಗಿ ಗೋಮಯದಿಂದ ರೂಪಗೊಂಡಿತ್ತು. ಘಟಿಕೋತ್ಸವದಲ್ಲಿ ಸ್ವಾತಂತ್ರ್ಯ ಮಹೋತ್ಸವದ ಅಮೃತ ಮಹೋತ್ಸವವನ್ನು ಆಚರಿಸುತ್ತಿರುವ ಈ ಹೊತ್ತಿನಲ್ಲಿ ವಸಾಹತುಶಾಹಿ ವಸ್ತ್ರ ನೀತಿಯಾದ ಕೋಟು, ಗೌನು, ತಲೆ ಮೇಲಿನ ಕಪ್ಪು ಟೊಪ್ಪಿಗೆಯನ್ನು ಬಹಿಷ್ಕರಿಸಿ ಭಾರತದ ಮೂಲ ನೆಲೆಯ ಸ್ವಾತಂತ್ರ್ಯ ಹೋರಾಟವನ್ನು ನೆನಪಿಸುವ ಖಾದಿ ಜಾಕೆಟ್ ಮತ್ತು ಗಾಂಧಿ ಟೋಪಿ, ರುಮಾಲು ಧರಿಸಲಾಗಿತ್ತು.




ವಿದ್ಯಾರ್ಥಿಗಳೂ ಮಾತ್ರವೇ ಅಲ್ಲದೆ ಅತಿಥಿ ಗಣ್ಯರು ಕೂಡ ಹೊಸ ಚಿಂತನೆಗೆ ಒಪ್ಪಿ, ಅದೇ ಧಿರಿಸಿನಲ್ಲಿ ಬಂದು ಅತ್ಯಂತ ಅಪರೂಪದ ಘಟಿಕೋತ್ಸವಕ್ಕೆ ರಾಜ್ಯದಲ್ಲಿ ನಾಂದಿ ಹಾಡಿದರು. ವೇದಿಕೆಯ ಒಂದು ಭಾಗದಲ್ಲಿ ಗಾಂಧೀಜಿಯವರ ಭಾವಚಿತ್ರವಿದ್ದು, ಇಡೀ ವೇದಿಕೆ ಹುಲ್ಲು, ಗೋಮಯ, ಅಕ್ಕಿಹಿಟ್ಟಿನ ಹಸೆಗಳಿಂದ ಅಲಂಕರಿಸಿದ್ದು ವಿಶೇಷವಾಗಿತ್ತು.



ಸಿದ್ಧಗಂಗಾ ಮಠದ ಹಿರಿಯ ಸ್ವಾಮಿಗಳಾಗಿದ್ದ ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮಿಗಳ 115ನೆಯ ಜಯಂತಿಯ ಅಂಗವಾಗಿ ನಡೆದ 'ನಡೆದಾಡೋ ದೇವರ ಬಸವ ಭಾರತ' ಗುರುವಂದನಾ ಕಾರ್ಯಕ್ರಮ ತುಮಕೂರಿನಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಕೇಂದ್ರ ಗೃಹ ಸಚಿವರಾದ ಶ್ರೀ ಅಮಿತ್ ಷಾರವರು ಪಾಲ್ಗೊಂಡು ಗದ್ದುಗೆಗೆ ಶ್ರದ್ಧಾ ನಮನವನ್ನು ಸಲ್ಲಿಸಿ, ಗುರುವಂದನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಈ ವೇಳೆ ಸಿದ್ಧಗಂಗಾ ಮಠದ ಪೀಠದ ಸ್ವಾಮಿಗಳಾದ ಸಿದ್ಧಲಿಂಗ ಸ್ವಾಮಿಗಳು, ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪ, ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ ಉಪಸ್ಥಿತರಿದ್ದರು.

ಶಿವಮೊಗ್ಗದಲ್ಲಿ ರಾಷ್ಟ್ರೋತ್ಥಾನ ಪರಿಷತ್ ವತಿಯಿಂದ ಹಿರಿಯ ಕವಿಗಳಾದ ಶ್ರೀ ಬಾಲಕೃಷ್ಣ ಕಾಮತ್ ಕಳಸ ಅವರು ಬರೆದಿರುವ 'ಧ್ಯೇಯ ಕಾರಂಜಿ' ಎಂಬ ದೇಶಭಕ್ತಿ ಗೀತೆಗಳ ಪುಸ್ತಕ ಬಿಡುಗಡೆ ಸಮಾರಂಭವು ಏಪ್ರಿಲ್ 29ರಂದು ನೆರವೇರಿತು. ಆರ್‌ಎಸ್‌ಎಸ್‌ನ ಹಿರಿಯ ಪ್ರಚಾರಕರಾದ ಶ್ರೀಯುತ ಸು. ರಾಮಣ್ಣನವರು ಪುಸ್ತಕವನ್ನು ಅನಾವರಣಗೊಳಿಸಿದರು. ಶಿವಮೊಗ್ಗ ರಾಷ್ಟ್ರೋತ್ಥಾನದ ಡಾ. ಸುಧೀಂದ್ರ ಅವರು ಅಧ್ಯಕ್ಷತೆ ವಹಿಸಿದ್ದರು.



ಸೇವೆ ಎಂಬ ಯಜ್ಞದಲ್ಲಿ ಸಮಿಧೆಯಂತೆ ಉರಿಯುವ, ತಾಯಿ ಭಾರತಿಯ ಪಾದಪದ್ಮಗಳ ಪೂಜಿಸೋಣ ಬನ್ನಿ, ಹಿಮಗಿರಿಯಾ ಶೃಂಗ ದೇವನದಿ ಗಂಗಾ, ಸಂಘದ ಸಸಿಯಿದು ಹೆಮ್ಮರವಾಗಿದೆ, ಮುಂತಾದ ಅನೇಕ ಸಂಘದ ಗೀತೆಗಳನ್ನು ಬರೆದವರು ಬಾಲಕೃಷ್ಣ ಕಾಮತ್ ಅವರು.




1990ರ ದಶಕದಲ್ಲಿ ಕಾಶ್ಮೀರಿ ಹಿಂದೂಗಳ ಮಾರಣಹೋಮಕ್ಕೆ ಕಾರಣನಾದ ಫಾರೂಖ್ ಅಹಮದ್ ಧಾರ್ ಅಲಿಯಾಸ್ ಬಿಟ್ಟಾ ಕರಾಟೆಯ ವಿರುದ್ಧ ಕಾಶ್ಮೀರಿ ಪಂಡಿತರ ಅಸೋಸಿಯೇಷನ್ ಹಾಗೂ ಸತೀಶ್ ಟಿಕ್ಕೂ ಅವರ ಕುಟುಂಬ ನ್ಯಾಯಾಲಯದ ಮೆಟ್ಟಿಲೇರಿದ್ದು 31 ವರ್ಷಗಳ ಬಳಿಕ ಮೊಕದ್ದಮೆ ಮತ್ತೆ ಶ್ರೀನಗರದ ಸೆಷನ್ಸ್ ಕೋರ್ಟಿನಲ್ಲಿ ಆರಂಭಗೊಂಡಿದೆ. ಅಲ್ಲದೆ ಸಿಬಿಐ ಹಾಗೂ ಎನ್‌ಐಎ ಕೂಡ 1990ರ ದಶಕದ ನರಮೇಧವನ್ನು ಕುರಿತು ತನಿಖೆ ನಡೆಸಲು ಕಾಶ್ಮೀರೀ ಪಂಡಿತ್ ಅಸೋಸಿಯೇಷನ್ ಪಿಟಿಶನ್ ಸಲ್ಲಿಸಿದೆ. 2017ರಲ್ಲಿ ಅಲ್ಲಿನ ಕೋರ್ಟ್ ಯಾವುದೇ ಸಾಕ್ಷ್ಯಾಧಾರಗಳಿಲ್ಲವೆಂದು ಮತ್ತು ಮೂರು ದಶಕಗಳ ತರುವಾಯು ತೆರೆಯುವ ಅಗತ್ಯವಿಲ್ಲವೆಂದು ಅರ್ಜಿಯನ್ನು ವಜಾ ಗೊಳಿಸಿತ್ತು.

'ದಿ ಕಾಶ್ಮೀರ್ ಫೈಲ್ಸ್' ಚಿತ್ರದ ನಂತರ ಅನೇಕ ಕಾಶ್ಮೀರೀ ಹಿಂದೂ ಕುಟುಂಬಗಳು ತಮಗಾದ ಅತ್ಯಂತ ಘೋರ ಅನುಭವಗಳನ್ನು ಜಗತ್ತಿನ ಎದುರು ತೆರೆದಿಟ್ಟಿದ್ದು ನ್ಯಾಯಕ್ಕಾಗಿ ಆಗ್ರಹ ಮಾಡುತ್ತಿದ್ದಾರೆ.

ಈ ಬಾರಿಯ ಅಮರನಾಥ ಯಾತ್ರೆ 30 ಜೂನ್‌ರಿಂದ ಆರಂಭವಾಗಲಿದೆ. 43 ದಿನಗಳ ಕಾಲ ದೇಗುಲದ ದರ್ಶನಕ್ಕೆ ಅವಕಾಶವಿದ್ದು ರಕ್ಷಾಬಂಧನದ ಹುಣ್ಣಿಮೆ ದಿನ ಅಂದರೆ ಆಗಸ್ಟ್ 11ರಂದು ಸಂಪನ್ನಗೊಳ್ಳಲಿದೆ. ಕೋವಿಡ್ ನಿಯಮಾವಳಿಗಳನ್ನು ಆಧರಿಸಿ ವಿಶೇಷ ದರ್ಶನದ ವ್ಯವಸ್ಥೆಯನ್ನು ಮಾಡಲಾಗುತ್ತದೆ ಅಲ್ಲದೆ, ಈ ಹಿಂದೆ ನಡೆದ ಅಹಿತಕರ ಘಟನೆಗಳ ದೃಷ್ಟಿಯನ್ನಿಟ್ಟುಕೊಂಡು ಸುರಕ್ಷತೆಯ ಕುರಿತು ವಿಶೇಷ ಗಮನ ಹರಿಸಿ ಬಿಗಿ ಭದ್ರತೆಯನ್ನು, ಅಗತ್ಯ ಕ್ರಮಗಳನ್ನೂ ಕೈಗೊಳ್ಳಲಾಗಿದೆ.

ಆಗಸ್ಟ್ 2019ರಂದು ಆರ್ಟಿಕಲ್ 370ಯನ್ನು ರದ್ದು ಮಾಡಲಾಗಿತ್ತು. ಅದೇ ಕಾರಣದಿಂದಾಗಿ ಆ ವರ್ಷ ಅಮರನಾಥ ಯಾತ್ರೆಯನ್ನು ಸಾರ್ವಜನಿಕರಿಗೆ ನಿರ್ಬಂಧ ಹೇರಲಾಗಿತ್ತು. ಆದರೆ 2020 ಮತ್ತು 2021ರಲ್ಲಿ ಎರಡು ವರ್ಷಗಳ ಕಾಲ ಕೊರೋನಾದ ಕಠಿಣ ನಿಯಮಗಳು ಹಾಗೂ ಲಾಕ್‌ಡೌನ್‌ನಿನ ಕಾರಣದಿಂದಾಗಿ



ಭಕ್ತರಿಗೆ ಯಾತ್ರೆ ಮಾಡಲು ಅವಕಾಶ ನೀಡಿರಲಿಲ್ಲ. ಕಳೆದ ಮೂರು ವರ್ಷಗಳಿಂದ ಯಾತ್ರೆ ಇಲ್ಲದಿರುವ ಕಾರಣಕ್ಕೆ ಈ ಬಾರಿ ಹೆಚ್ಚಿನ ಸಂಖ್ಯೆಯ ಭಕ್ತರು ಬರುವ ಸಾಧ್ಯತೆಯಿದೆ ಎನ್ನಲಾಗಿದ್ದು, ಸರಕಾರವೂ ಅಗತ್ಯವಾದ ವ್ಯವಸ್ಥೆ ಮಾಡಲು ಸಿದ್ಧವಿದೆ ಎನ್ನಲಾಗಿದೆ.



ನೆರೆಯ ಚೀನಾದಿಂದ ಆಟಿಕೆಗಳು, ಆಟಗಳು, ಕ್ರೀಡಾ ಸಾಮಗ್ರಿಗಳ ಆಮದು ಕಡಿಮೆಯಾಗುತ್ತಿದೆ. ಚೀನಾದಿಂದ ಈ ಉತ್ಪನ್ನಗಳ ಆಮದು 2018–19ರಲ್ಲಿ 451 ಮಿಲಿಯನ್ ಡಾಲರ್‌ಗಳಿಂದ 2021ರಲ್ಲಿ ಸುಮಾರು 206 ಮಿಲಿಯನ್ ಡಾಲರ್‌ಗಳಿಗೆ ಕಡಿಮೆಯಾಗಿದೆ ಎಂದು ಕೇಂದ್ರ ಸರಕಾರ ತಿಳಿಸಿದೆ. ಕೇಂದ್ರ ಸರಕಾರವು ಭಾರತದಲ್ಲಿ ಆಟಿಕೆಗಳು, ಕ್ರೀಡಾ ಸಾಮಗ್ರಿಗಳ ತಯಾರಿಕೆಗೆ ಒತ್ತು ನೀಡುತ್ತಿದ್ದು, ಈ ನಿಟ್ಟಿನಲ್ಲಿ ಹೊಸ ರೀತಿಯ ಆಟಿಕೆಗಳ ನಿರ್ಮಾಣ, ತಯಾರಿಕೆ, ಹೂಡಿಕೆಗಳಿಗೆ ಹೆಚ್ಚಿನ ಒತ್ತು ನೀಡಿದ್ದು, ಅದಕ್ಕಾಗಿ ವಿಶೇಷವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದರ ಪರಿಣಾಮ ಆಮದಿನ ಪ್ರಮಾಣ ಇಳಿಕೆಯಾಗಿದೆ ಎನ್ನಲಾಗಿದೆ.

## ನಕ್ಸಲ್ ಪೀಡಿತ ಪ್ರದೇಶಗಳಲ್ಲಿ 10,600 ಕಿ.ಮೀ ರಸ್ತೆ ನಿರ್ಮಾಣ: ಕೇಂದ್ರ

ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ರಸ್ತೆ ಜಾಲ ವಿಸ್ತರಣೆಗೆ ಕೇಂದ್ರದ ವಿಶೇಷ ಒತ್ತು ನೀಡುತ್ತಿದೆ, ಸುಮಾರು 13,000 ಕೋಟಿ ರೂಪಾಯಿ ವೆಚ್ಚದಲ್ಲಿ ಈಗಾಗಲೇ 10, 600 ಕಿ.ಮೀ ರಸ್ತೆಗಳನ್ನು ಈ ಪ್ರದೇಶದಲ್ಲಿ ನಿರ್ಮಿಸಲಾಗಿದೆ ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಹೇಳಿದ್ದಾರೆ.

ಲೋಕಸಭೆಗೆ ಲಿಖಿತ ಉತ್ತರದಲ್ಲಿ ಮಾಹಿತಿ ನೀಡಿದ ಸಚಿವರು, "ನಕ್ಸಲ್ ಪೀಡಿತ ಪ್ರದೇಶಗಳಲ್ಲಿ 16,200 ಕಿ.ಮೀ. ಗೂ ಹೆಚ್ಚು ರಸ್ತೆಗಳನ್ನು ನಿರ್ದಿಷ್ಟ ಯೋಜನೆಗಳ ಅಡಿಯಲ್ಲಿ ರಸ್ತೆ ಅಗತ್ಯ ಯೋಜನೆ–I (RRP-1) ಮತ್ತು ಎಡಪಂಥೀಯ ಉಗ್ರವಾದ ಪೀಡಿತ ಪ್ರದೇಶಗಳಿಗೆ ರಸ್ತೆ ಸಂಪರ್ಕ ಯೋಜನೆ (RCPLWEA) ಅಡಿಯಲ್ಲಿ ಅನುಮೋದಿಸಲಾಗಿದೆ ಮತ್ತು 10,600 ಕಿ.ಮೀ. ರಸ್ತೆಗಳ ನಿರ್ಮಾಣವು ಯೋಜನೆಗಳ ಭಾಗವಾಗಿದೆ" ಎಂದು ಹೇಳಿದರು.

"ರಸ್ತೆ ಜಾಲದ ವಿಸ್ತರಣೆಗೆ ವಿಶೇಷ ಒತ್ತು ನೀಡುವ ಮೂಲಕ ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಕೇಂದ್ರ ಸರ್ಕಾರವು ಅಭಿವೃದ್ಧಿಯ ವಿವಿಧ ಉಪಕ್ರಮಗಳನ್ನು ಕೈಗೊಂಡಿದೆ. ಇದರಲ್ಲಿ ಟೆಲಿಕಾಂ ಸಂಪರ್ಕವನ್ನು ಸುಧಾರಿಸುವುದು, ಸ್ಥಳೀಯ ಜನಸಂಖ್ಯೆಯ ಆರ್ಥಿಕ ಸೇರ್ಪಡೆ, ಕೌಶಲ್ಯ ಅಭಿವೃದ್ಧಿ ಮತ್ತು ಶಿಕ್ಷಣ ಸೌಲಭ್ಯಗಳು ಸೇರಿದೆ. ಇದಲ್ಲದೆ, ಹಂತ–ಎಲ್ ಅಡಿಯಲ್ಲಿ 2,343 ಮೊಬೈಲ್ ಟವರ್‌ಗಳನ್ನು ಸ್ಥಾಪಿಸಲಾಗಿದೆ ಮತ್ತು ನಕ್ಸಲ್ ಬಾಧಿತ ಪ್ರದೇಶಗಳಿಗೆ ಮೊಬೈಲ್ ಸಂಪರ್ಕ ಯೋಜನೆಯ ಹಂತ–II ಅಡಿಯಲ್ಲಿ 2,542 ಟವರ್‌ಗಳಿಗೆ ವರ್ಕ್ ಆರ್ಡರ್ ನೀಡಲಾಗಿದೆ" ಎಂದು ಸಚಿವರು ಹೇಳಿದರು.

पुंगव PUNGAVA
# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th APRIL 2022

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 15-04-2022



## ಆಪರೇಷನ್ ಗಂಗಾ ಅತ್ಯಂತ ಯಶಸ್ವಿ ಮತ್ತು ಸುಸಂಘಟಿತ ಕಾರ್ಯಾಚರಣೆ


ಯುದ್ಧ ಪೀಡಿತ ಉಕ್ರೇನ್‌ನಿಂದ ಸಿಲುಕಿರುವ ಭಾರತೀಯರನ್ನು ಸ್ಥಳಾಂತರಿಸಲು ಕೈಗೊಂಡ ಆಪರೇಷನ್ ಗಂಗಾ ವಿಶ್ವದ ಎಲ್ಲಿಯಾದರೂ ನಡೆದ ಅತ್ಯಂತ ಉತ್ತಮವಾಗಿ ಸಂಘಟಿತ ಮತ್ತು ಯಶಸ್ವಿಯಾದ ಕಾರ್ಯಾಚರಣೆಯಾಗಿದೆ ಎಂದು ಹೇಳಿದ್ದಾರೆ. ಉಕ್ರೇನ್‌ನಲ್ಲಿನ ಪರಿಸ್ಥಿತಿಯ ಕುರಿತು ಚರ್ಚೆಯ ಸಂದರ್ಭದಲ್ಲಿ ಪುರಿ ಅವರು ಲೋಕಸಭೆಯಲ್ಲಿ ಈ ಹೇಳಿಕೆಯನ್ನು ನೀಡಿದರು.

"ಆಪರೇಷನ್ ಗಂಗಾ ಯಾವುದೇ ದೇಶ, ವಿಶ್ವದ ಎಲ್ಲಿಯಾದರೂ ಕೈಗೊಂಡಿರುವ ಅತ್ಯಂತ ಸುಸಂಘಟಿತ ಮತ್ತು ಯಶಸ್ವಿ ಮಾನವೀಯ ಸ್ಥಳಾಂತರಿಸುವ ಕಾರ್ಯಾಚರಣೆಗಳಲ್ಲಿ ಒಂದಾಗಿದೆ" ಎಂದಿದ್ದಾರೆ. ಪ್ರಧಾನಿ ಮಟ್ಟದಿಂದ ವಿದೇಶಾಂಗ ಸಚಿವರವರೆಗಿನ ಕಾರ್ಯಾಚರಣೆಯಲ್ಲಿ ಸರ್ಕಾರದ ಪಾಲ್ಗೊಳ್ಳುವಿಕೆಯ ಕುರಿತು ಹರ್ಷ ವ್ಯಕ್ತಪಡಿಸಿದ ಅವರು, "ನಮ್ಮ ಪ್ರತಿಯೊಬ್ಬ ನಾಗರಿಕನ ಯೋಗಕ್ಷೇಮದ ಬಗ್ಗೆ ನಾವು ಚಿಂತಿಸುತ್ತಿದ್ದೇವೆ" ಎಂದು ಹೇಳಿದರು.

"ಒಂದು ಸಂಜೆ ಬುಡಾಪೆಸ್ಟ್‌ನಲ್ಲಿ, ಇದ್ದಕ್ಕಿದ್ದಂತೆ 1700 ಜನರು ಏಕಾಏಕಿಯಾಗಿ ಬಂದರು. ರೊಮೇನಿಯಾ ಮತ್ತು ಪೋಲೆಂಡ್‌ನ ಗಡಿಯಲ್ಲಿ ಅಡಚಣೆಯಾದ ಕಾರಣ ನೂಕು ನುಗ್ಗಲು ಉಂಟಾಯಿತು. ಈ ಪರಿಸ್ಥಿತಿಯನ್ನೂ ನಾವು ನಿರ್ವಹಿಸಿದೆವು. ನಾವು ಒಂದು ದಿನದಲ್ಲಿ 4 ರಿಂದ 7 ರಿಂದ 11ಕ್ಕೆ ವಿಮಾನಗಳ ಸಂಖ್ಯೆಯನ್ನು ಹೆಚ್ಚಿಸಿದೆವು" ಎಂದರು.



## 18 ಭಾರತೀಯ ಮತ್ತು 4 ಪಾಕಿಸ್ಥಾನಿ ಯೂಟ್ಯೂಬ್ ಚಾನೆಲ್‌ಗಳ ನಿಷೇಧ




ಭಾರತದ ರಾಷ್ಟ್ರೀಯ ಭದ್ರತೆ, ವಿದೇಶಿ ಸಂಬಂಧಗಳು ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಿಸಿದ ತಪ್ಪು ಮಾಹಿತಿಯನ್ನು ಹರಡುವುದಕ್ಕಾಗಿ ಸರ್ಕಾರವು 18 ಭಾರತೀಯ ಮತ್ತು 4 ಪಾಕಿಸ್ಥಾನಿ ಯೂಟ್ಯೂಬ್ ಚಾನೆಲ್‌ಗಳ ಜೊತೆಗೆ ಹಲವಾರು ಇತರ ಸಾಮಾಜಿಕ ಮಾಧ್ಯಮ ಖಾತೆಗಳನ್ನು ನಿಷೇಧಿಸಿದೆ.

ನಿರ್ಬಂಧಿಸಲಾದ ಯೂಟ್ಯೂಬ್ ಚಾನೆಲ್‌ಗಳು 260 ಕೋಟಿಗೂ ಹೆಚ್ಚು ವೀಕ್ಷಕರನ್ನು ಹೊಂದಿದ್ದವು ಮತ್ತು ರಾಷ್ಟ್ರೀಯ ಭದ್ರತೆ, ಭಾರತದ ವಿದೇಶಾಂಗ ಸಂಬಂಧಗಳು ಮತ್ತು ಸಾರ್ವಜನಿಕ ಸುವ್ಯವಸ್ಥೆಯಂತಹ ಸೂಕ್ಷ್ಮ ವಿಷಯಗಳ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ನಕಲಿ ಸುದ್ದಿ ಮತ್ತು ಸಂಘಟಿತವಾಗಿ ತಪ್ಪು ಮಾಹಿತಿಯನ್ನು ಹರಡುತ್ತಿದ್ದವು ಎಂದು ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

"ಮಾಹಿತಿ ಮತ್ತು ಪ್ರಸಾರ ಸಚಿವಾಲಯ, 2021ರ ಐಟಿ ನಿಯಮಗಳ ಅಡಿಯಲ್ಲಿ ತುರ್ತು ಅಧಿಕಾರವನ್ನು ಬಳಸಿಕೊಂಡು, 22 ಯೂಟ್ಯೂಬ್ ಆಧಾರಿತ ಸುದ್ದಿ ಚಾನೆಲ್‌ಗಳು, ಮೂರು ಟ್ವಿಟರ್ ಖಾತೆಗಳು, ಒಂದು ಫೇಸ್‌ಬುಕ್ ಖಾತೆ ಮತ್ತು ಒಂದು ಸುದ್ದಿ ವೆಬ್‌ಸೈಟ್‌ನ್ನು ನಿರ್ಬಂಧಿಸಲು ಏಪ್ರಿಲ್ 4ರಂದು ಆದೇಶಗಳನ್ನು ಹೊರಡಿಸಿದೆ" ಎಂದು ಸಚಿವಾಲಯದ ಹೇಳಿಕೆ ತಿಳಿಸಿದೆ. ಸಚಿವಾಲಯದ ಪ್ರಕಾರ, ಭಾರತೀಯ ಸಶಸ್ತ್ರ ಪಡೆಗಳು, ಜಮ್ಮು ಮತ್ತು ಕಾಶ್ಮೀರ ಮುಂತಾದ ವಿವಿಧ ವಿಷಯಗಳ ಕುರಿತು ನಕಲಿ ಸುದ್ದಿಗಳನ್ನು ಪೋಸ್ಟ್ ಮಾಡಲು ಇಂತಹ ಯೂಟ್ಯೂಬ್ ಚಾನೆಲ್‌ಗಳನ್ನು ಬಳಸಲಾಗುತ್ತಿತ್ತು ಎನ್ನಲಾಗಿದೆ.

## ವಿವಿಧ ಜಿಲ್ಲೆಗಳಲ್ಲಿ 75 ಡಿಜಿಟಲ್ ಬ್ಯಾಂಕಿಂಗ್ ಘಟಕ ಸ್ಥಾಪಿಸಲಿದೆ ಕೇಂದ್ರ



ಕೇಂದ್ರ ಬಜೆಟ್ 2022-23 ರಲ್ಲಿ ಘೋಷಿಸಿದಂತೆ, ದೇಶದ ವಿವಿಧ ಜಿಲ್ಲೆಗಳಲ್ಲಿ 75 ಡಿಜಿಟಲ್ ಬ್ಯಾಂಕಿಂಗ್ ಘಟಕ (ಡಿಬಿಯು) ಗಳನ್ನು ಸ್ಥಾಪಿಸಲಾಗುವುದು, ಇದರಿಂದ ಡಿಜಿಟಲ್ ಬ್ಯಾಂಕಿಂಗ್ನ ಪ್ರಯೋಜನಗಳನ್ನು ದೇಶದಲ್ಲಿ ಗ್ರಾಹಕ ಸ್ನೇಹಿ ರೀತಿಯಲ್ಲಿ ಒದಗಿಸಲು ಸಾಧ್ಯವಾಗಲಿದೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ.

ಲೋಕಸಭೆಯಲ್ಲಿ ಲಿಖಿತ ಉತ್ತರದಲ್ಲಿ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಡಾ.ಭಾಗವತ್ ಕರದ್ ಅವರು ಈ ವಿಷಯ ತಿಳಿಸಿದ್ದು, ಡಿಜಿಟಲ್ ಬ್ಯಾಂಕಿಂಗ್ ಘಟಕಗಳನ್ನು ಸ್ಥಾಪಿಸಲು ಆರ್‌ಬಿಐನಿಂದ ಯಾವುದೇ ಹಣವನ್ನು ನಿಗದಿಪಡಿಸಲಾಗಿಲ್ಲ ಮತ್ತು ಡಿಜಿಟಲ್ ಬ್ಯಾಂಕಿಂಗ್ ಘಟಕಗಳು ಪ್ರಸಕ್ತ ಕ್ಯಾಲೆಂಡರ್ ವರ್ಷದ ಅಂತ್ಯದ ವೇಳೆಗೆ ಕಾರ್ಯನಿರ್ವಹಿಸುವ ನಿರೀಕ್ಷೆಯಿದೆ ಎಂದು ಅವರು ಹೇಳಿದರು.

ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿರುವಂತೆ, ಈ ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕಾಗಿ ಮಾರ್ಗಸೂಚಿಯನ್ನು ತಯಾರಿಸಲು ಸಮಿತಿಯನ್ನು ರಚಿಸಲಾಗಿದೆ. ಆರ್‌ಬಿಐ ಮಾನದಂಡಗಳನ್ನು ವಿವರಿಸಿದ್ದು, ಅದರಂತೆ ಹೆಚ್ಚಿನ ಮಹಿಳಾ ಜನಸಂಖ್ಯೆ, ಯುವಕರು, ಎಂಎಸ್‌ಎಂಇಗಳು, ರಫ್ತುಗಳು, ಭೌಗೋಳಿಕವಾಗಿ ಮತ್ತು ಆಯಕಟ್ಟಿನ ಪ್ರಮುಖ ಸ್ಥಳಗಳು, ಈಶಾನ್ಯ ಪ್ರದೇಶಗಳು, ಮಧ್ಯಮ ಮಟ್ಟದ ಡಿಜಿಟಲ್ ಅಳವಡಿಕೆ ಇತ್ಯಾದಿಗಳನ್ನು ಡಿಬಿಯುಗಳ ಸ್ಥಾಪನೆಗಾಗಿ 75 ಜಿಲ್ಲೆಗಳ ಪಟ್ಟಿಯನ್ನು ಅಂತಿಮಗೊಳಿಸುವಾಗ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ ಎಂದಿದ್ದಾರೆ.

## ಕಳೆದ 8 ವರ್ಷಗಳಲ್ಲಿ ಭಾರತದ ಕಡಲ ಕ್ಷೇತ್ರ ಹೊಸ ಎತ್ತರಕ್ಕೆ ಏರಿದೆ: ಮೋದಿ



ರಾಷ್ಟ್ರೀಯ ಕಡಲ ದಿನವಾದ ಏಪ್ರಿಲ್ 5ರಂದು ಮಾತನಾಡುವ ಸಂದರ್ಭದಲ್ಲಿ ಭಾರತದ ಆರ್ಥಿಕ ಬೆಳವಣಿಗೆಗೆ ಕಡಲ ಕ್ಷೇತ್ರದ ಪ್ರಾಮುಖ್ಯತೆಯನ್ನು ಒತ್ತಿ ಹೇಳಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಕಳೆದ ಎಂಟು ವರ್ಷಗಳಲ್ಲಿ ಭಾರತದ ಕಡಲ ಕ್ಷೇತ್ರವು ಹೊಸ ಎತ್ತರಕ್ಕೆ ಏರಿದೆ ಮತ್ತು ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳನ್ನು ಉತ್ತೇಜಿಸಲು ಕೊಡುಗೆ ನೀಡಿದೆ ಎಂದಿದ್ದಾರೆ.

ಪ್ರಧಾನಿ ಮೋದಿ ಟ್ವೀಟ್ ಮಾಡಿ, "ರಾಷ್ಟ್ರೀಯ ಕಡಲ ದಿನದಂದು ನಾವು ನಮ್ಮ ವೈಭವೋಪೇತ ಕಡಲ ಇತಿಹಾಸವನ್ನು ನೆನಪಿಸಿಕೊಳ್ಳುತ್ತೇವೆ ಮತ್ತು ಭಾರತದ ಆರ್ಥಿಕ ಬೆಳವಣಿಗೆಗೆ ಕಡಲ ಕ್ಷೇತ್ರದ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತೇವೆ. ಕಳೆದ 8 ವರ್ಷಗಳಲ್ಲಿ, ನಮ್ಮ ಕಡಲ ಕ್ಷೇತ್ರವು ಹೊಸ ಎತ್ತರವನ್ನು ಏರಿದೆ ಮತ್ತು ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳನ್ನು ಉತ್ತೇಜಿಸಲು ಕೊಡುಗೆ ನೀಡಿದೆ" ಎಂದಿದ್ದಾರೆ.

"ಕಳೆದ 8 ವರ್ಷಗಳಲ್ಲಿ ಭಾರತ ಸರ್ಕಾರವು ಬಂದರು ನೇತೃತ್ವದ ಅಭಿವೃದ್ಧಿಯತ್ತ ಗಮನಹರಿಸಿದೆ, ಇದರಲ್ಲಿ ಬಂದರು ಸಾಮರ್ಥ್ಯಗಳನ್ನು ವಿಸ್ತರಿಸುವುದು ಮತ್ತು ಅಸ್ತಿತ್ವದಲ್ಲಿರುವ ವ್ಯವಸ್ಥೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡುವುದು. ಭಾರತೀಯ ಉತ್ಪನ್ನಗಳು ಹೊಸ ಮಾರುಕಟ್ಟೆಗಳಿಗೆ ಪ್ರವೇಶ ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಜಲಮಾರ್ಗಗಳನ್ನು ಬಳಸಿಕೊಳ್ಳುವುದು ಸೇರಿದೆ" ಎಂದಿದ್ದಾರೆ.

"ನಾವು ಆರ್ಥಿಕ ಪ್ರಗತಿಗಾಗಿ ಕಡಲ ವಲಯವನ್ನು ಸದುಪಯೋಗಪಡಿಸಿಕೊಳ್ಳುತ್ತಿರುವ ಮತ್ತು ಆತ್ಮನಿರ್ಭರ ಭಾರತವನ್ನು ನಿರ್ಮಿಸುತ್ತಿರುವ ಈ ಸಂದರ್ಭದಲ್ಲಿ ಭಾರತವು ಹೆಮ್ಮೆಪಡುವ ಸಮುದ್ರ ಪರಿಸರ ವ್ಯವಸ್ಥೆ ಮತ್ತು ವೈವಿಧ್ಯತೆಯನ್ನು ರಕ್ಷಿಸಲು ನಾವು ಸಾಕಷ್ಟು ಕಾಳಜಿಯನ್ನು ತೆಗೆದುಕೊಳ್ಳುತ್ತಿದ್ದೇವೆ"ಎಂದು ಪ್ರಧಾನಿ ಹೇಳಿದ್ದಾರೆ.

ರಾಷ್ಟ್ರೀಯ ಕಡಲ ದಿನವನ್ನು ಮೊದಲು ಏಪ್ರಿಲ್ 5, 1964ರಂದು ಆಚರಿಸಲಾಯಿತು. ಅಂದಿನಿಂದ, ಪ್ರತಿ ವರ್ಷ ಈ ದಿನವನ್ನು ರಾಷ್ಟ್ರೀಯ ಕಡಲ ದಿನವಾಗಿ ಆಚರಿಸಲಾಗುತ್ತದೆ. ಭಾರತೀಯ ಆರ್ಥಿಕತೆಗೆ ಕೊಡುಗೆ ಮತ್ತು ಅದರ ಪೋಷಣೆಯಲ್ಲಿ ಕಡಲ ಉದ್ಯಮವು ವಹಿಸುವ ಪ್ರಮುಖ ಪಾತ್ರದ ಆಚರಣೆಗೆ ಈ ದಿನವನ್ನು ಸಮರ್ಪಿಸಲಾಗಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.